ದಿನಾಂಕ : 05.09.2015 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿಡಬ್ಲ್ಯುಃ 1

ಮುಖ್ಯವಿಚಾರಣೆ ಃ ಶ್ರೀ ಎ.ಎಸ್.ಕೆ. ವಕೀಲರಿಂದ

ನಾನು ನನ್ನ ಮುಖ್ಯವಿಚಾರಣಾ ಸಾಕ್ಷ್ಯವಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ನನ್ನ ಶಪಥಪತ್ರದಲ್ಲಿ ಬರೆದಿರುವುದನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಶಪಥಪತ್ರ ಬರೆದ ನಂತರ ಅದನ್ನು ನನಗೆ ಓದಿ, ನಂತರ ಸಹಿ ಮಾಡಿರುತ್ತೇನೆ. ಶಪಥಪತ್ರದಲ್ಲಿ ಬರೆದಿರುವುದೆಲ್ಲಾ ಸತ್ಯವಾಗಿರುತ್ತವೆ.

ಪ್ರಥಮ ವರ್ತಮಾನ ವರದಿ ಮತ್ತು ಹೇಳಿಕೆಯ ಪ್ರಮಾಣಿತಪ್ರತಿಗಳನ್ನು ನಿಪಿ1 ಮತ್ತು ನಿಪಿ2 ಎಂದು, ಮರಣೋತ್ತರ ಪರೀಕ್ಷೆ ವರದಿ ಪ್ರಮಾಣಿತ ಪ್ರತಿಯನ್ನು ನಿ.ಪಿ.3 ಎಂದು, ಅಪಘಾತ ಪರಿಹಾರ ಸೂಚನಾ ಪತ್ರವನ್ನು ನಿ.ಪಿ 4 ಎಂದು, ಅಪಘಾತ ಸ್ಥಳದ ಮಹಜರು ಮತ್ತು ನಕ್ಷೆ ಪ್ರಮಾಣಿತ ಪ್ರತಿಗಳನ್ನು ನಿ.ಪಿ 5 ಮತ್ತು 6 ಎಂದು, ದೋಷಾರೋಪಣೆ ಪಟ್ಟಿ ಜೊತೆಗೆ ಹೇಳಿಕೆಗಳ ಪ್ರಮಾಣಿತ ಪ್ರತಿಯನ್ನು ನಿ.ಪಿ.7 ಎಂದು, ಒಟ್ಟು 68 ನಗದು ಬಿಲ್ ಮತ್ತು ಮುಂಗಡ ರಶೀದಿಗಳನ್ನು ನಿ.ಪಿ 8 ಎಂದು, ಸೇವಾ ಪುಸ್ತಕದ ನಿಜಪ್ರತಿಯನ್ನು ನಿ.ಪಿ.9 ಎಂದು, 33 ಪ್ರಯೋಗಾಲಯ ವರದಿಗಳನ್ನು ಒಟ್ಟಾಗಿ ನಿ.ಪಿ.10 ಎಂದು, ಒಳರೋಗಿಗಳ ಕಾರ್ಡ್ ಮತ್ತು ನೋಂದಣಿ ಪತ್ರವನ್ನು ನಿ.ಪಿ.11 ಮತ್ತು 12 ಎಂದು, ಪ್ರಥಮ ಚಿಕಿತ್ಸೆ ನೀಡಿರುವ ಬಗ್ಗೆ ಪತ್ರವನ್ನು ನಿ.ಪಿ.13 ಎಂದು ಮತ್ತು ವೇತನ ಪ್ರಮಾಣ ಪತ್ರವನ್ನು ನಿ.ಪಿ.14 ಎಂದು ಗುರುತಿಸಲಾಯಿತು.

ಪಾಟೀಸವಾಲು ಃ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

ತೆ ನ್ಯಾ ನ ಉ ಬೆ ಮಾ

ಸಾ ಓ ಹೇ ಕೇ ಸ ಇ ಓ

ಪ್ರ.ಹಿ.ಸಿ.ನ್ಯಾ. ಮತ್ತು ಎಂಎಸಿಟಿ, ಬೆಳ್ತಂಗಡಿ.